ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಲ್ಲಿರುವ ಅಧಿಕಾರಿಗಳ ಸಂಖ್ಯೆ

೫೯೮. ಶ್ರೀ ಗೋಪಾಲ ಎಂ. ಕಾನಡೆ (ಸಿರ್ಸಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ.—

ಅ) ಕರ್ನಾಟಕ ಗೃಹ ಮಂಡಳಿಯ ನೌಕರರ ಸಂಖ್ಯೆ ಎಷ್ಟು? ಇವರುಗಳಲ್ಲಿ ಇಂಜಿನಿಯರುಗಳ ಸಂಖ್ಯೆ ಎಷ್ಟು ?

ಆ) ನಕಾಶೆ ಬಿಡಿಸುವ ಕೆಲಸವೇ ಗೊತ್ತಿಲ್ಲದ ಇಂಜಿನಿಯರುಗಳನ್ನು ಮಂಡಳಿಯಲ್ಲಿ ನೇಮಿಸಿ ಕೊಂಡಿರುವುದು ನಿಜವೇ ಹಾಗಿದ್ದಲ್ಲಿ ವಿವರ ನೀಡುವುದು ?

ಶ್ರೀ ಆರ್.ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಕರ್ನಾಟಕ ಗೃಹ ಮಂಡಳಿಯಲ್ಲಿನ ಒಟ್ಟು ನೌಕರರ ಸಂಖ್ಯೆ: ೧೦೨೨ ಇವರುಗಳಲ್ಲಿ ೧೩೪ ಜನ ಇಂಜಿನಿಯರುಗಳು.

ಆ) ಇಲ್ಲ.

ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯ ವ್ಯಾಪ್ತಿಯಲ್ಲಿನ ನಿವೇಶನಗಳನ್ನು ಸಂಘ ಸಂಸ್ಥೆಗಳಿಗೆ, ವ್ಯಕ್ತಿಗಳಿಗೆ ನೀಡಿರುವ ವಿವರ

೫೯೩. ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ ಶಹರ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

೧) ೧೯೮೬ರಿಂದ ಈವರೆಗೆ ಧಾರವಾಡ ಮಹಾ ನಗರಸಭೆಯ ವ್ಯಾಪ್ತಿಯಲ್ಲಿನ ಬೆಲೆಯುಳ್ಳ ನಿವೇಶನಗಳನ್ನು ಸಂಘ ಸಂಸ್ಥೆಗಳಿಗೆ ಹಾಗೂ ವ್ಯಕ್ತಿಗಳಿಗೆ ನೀಡಲಾಗಿದೆಯೇ (ವರ್ಷವಾರು ವಿವರಗಳನ್ನು ಅಂದರೆ ಅವರ ಪೂರ್ಣ ಹೆಸರು ವಿಳಾಸದೊಂದಿಗೆ ತಿಳಿಸುವುದು).—

೨) ಸದ್ಯ ಮಹಾನಗರಸಭೆಗೆ ನಿವೇಶನಗಳಿಗೆ ಬೇಡಿಕೆ ಸಲ್ಲಿಸಿ ಪೆಂಡಿಂಗ್ ಇರುವ ಅರ್ಜಿಗಳ ವಿವರ ಕೊಡುವುದು ?

ಶ್ರೀ ಆರ್.ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).

೧) ಹೌದು.

(ವಿವರಗಳನ್ನು ಪ್ರತ್ಯೇಕ ಪಟ್ಟಿಯಲ್ಲಿ ಸೂಚಿಸಲಾಗಿದೆ).

೨) ಮಹಾನಗರಪಾಲಿಕೆಯಲ್ಲಿ ನಿವೇಶನ ಮಂಜೂರಿ ಬಗ್ಗೆ ಯಾವ ಬೇಡಿಕೆಗಳು ಬಾಕಿ ಇರುವುದಿಲ್ಲ. ಮಹಾನಗರಸಭೆ ನಿವೇಶನಗಳ ಬೇಡಿಕೆ ಸ್ವೀಕೃತಿ ಆದ ತಕ್ಷಣ ಅರ್ಜಿಗಳನ್ನು ಪರಿಶೀಲಿಸಲು ಹುಬ್ಬಳ್ಳಿ-ಧಾರವಾಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಆಗಿಂದಾಗ್ಗೆ ವರ್ಗಾಯಿಸಲಾಗುತ್ತಿದೆ.

ತುಮಕೂರಿನಲ್ಲಿನ ಕರ್ನಾಟಕ ಗೃಹ ಮಂಡಳಿಯಿಂದ ಮನೆಗಳು

೫೨೬. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).— ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ೧೯೮೦ನೇ ಸಾಲಿನಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್‌ನವರು ತುಮಕೂರಿನಲ್ಲಿ ಮಧ್ಯಮ ವರ್ಗ ಹಾಗೂ ಅಲ್ಪ ಆದಾಯದವರಿಗಾಗಿ ಅರ್ಜಿ ಕರೆಯಲಾಗಿದ್ದು ನಿಜವೇ ?

ಆ) ಹಾಗಿದ್ದಲ್ಲಿ ಇದುವರೆವಿಗೂ ಸಾರ್ವಜನಿಕರಿಂದ ಎಷ್ಟು ಅರ್ಜಿಗಳು ಬಂದಿವೆ ?

ಇ) ತುಮಕೂರು ನಗರಕ್ಕೆ ಸೇರಿದ ಶೆಟ್ಟಿಹಳ್ಳಿ ಮರಳೂರು ದಿಣ್ಣೆ ಈ ಎರಡೂ ಹಳ್ಳಿಗಳಿಂದ ಎಷ್ಟು ಅರ್ಜಿಗಳು ಬಂದಿವೆ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಅ) ಖಿಖಿರ

ಇ) ತುಮಕೂರು ಶೆಟ್ಟಿಹಳ್ಳಿಯಿಂದ ೨೬೨ ಅರ್ಜಿಗಳು ಹಾಗೂ ಮಂರಳೂರು ದಿಣ್ಣೆಯಿಂದ ೭೮ ಅರ್ಜಿಗಳು ಬಂದಿವೆ.

೧೯೮೬ರಿಂದ ಜಯಂತಿ ಶತಮಾನೋತ್ಸವ ಹಾಗೂ ಮಹತ್ವದ ಕಾರ್ಯಕ್ರಮಂಗಳಿಗೆ ಮಾಡಿರು ವಿವರ ಹಾಗೂ ಅದರ ಖರ್ಚಿನ ಬಗ್ಗೆ

ಶ್ರೀ ಬಿ. ಶ್ರೀ. ಚಂದ್ರಕಾಂತ ಬೆಲ್ಲದ (ಧಾರವಾಡ ಶಹರ).—ಮಾನ್ಯ ವಾರ್ತಾ ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ೧೯೮೬ರಿಂದ ಈವರೆಗೆ ಜಯಂತಿ ಶತಮಾನೋತ್ಸವ ಹಾಗೂ ಮಹತ್ವದ ಕಾರ್ಯಕ್ರಮಂಗಳನ್ನು ಕೈಗೊಂಡಿದ್ದಲ್ಲಿ ವಿವರ ಹಾಗೂ ಆ ಬಗ್ಗೆ ತಗಂಲಿದ ಅವುಗಳ ಖರ್ಚು ಎಷ್ಟು (ಪ್ರತಿ ವರ್ಷಗಳ ಪ್ರತ್ಯೇಕ ವಿವರ ನೀಡುವುದು) ?

ಆ) ೧೯೮೬ರಿಂದ ಈವರೆಗೆ ಕನ್ನಡ ಸಂಸ್ಕೃತಿ ಇಲಾಖೆಯು ಪ್ರತಿ ವರ್ಷವೂ ಶಾಶ್ವತವಾಗಿ ನಡೆಸಿಕೊಂಡು ಬಂದ ಕಾರ್ಯಕ್ರಮಗಳ ವಿವರ ಹಾಗೂ ಅವುಗಳಿಗೆ ಖರ್ಚು ಮಾಡಿದ ಹಣವೆಷ್ಟು ? (ಪ್ರತ್ಯೇಕ ಸಾಲುವಾರು ವಿವರಗಳನ್ನು ನೀಡುವುದು).

ಇ) ೧೯೮೬ ರಿಂದ ಈವರೆಗೆ ನೃತ್ಯ–ಸಂಗೀತ ಹಾಗೂ ನಾಟಕ ಮುಂತಾದ ಕಾರ್ಯಕ್ರಮಗಳಿಗಾಗಿ ಪ್ರತಿವರ್ಷ ಯಾವ ಯಾವ ಸಂಸ್ಥೆಗಳಿಗೆ ಹಣ ನೀಡಲಾಗಿದೆ (ಸಾಲುವಾರು ವಿವರ ನೀಡುವುದು)

(ವಾರ್ತಾ ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರು).—

ಅ) ಅನುಬಂಧ—೧ ಲಗತ್ತಿಸಿದೆ.

ಆ) ಅನುಬಂಧ—೨ ಲಗತ್ತಿಸಿದೆ.

ಇ) ಅನುಬಂಧ—೩ ಲಗತ್ತಿಸಿದೆ.

ಅನುಬಂಧ–1

1986–87ನೇ ಸಾಲಿನಲ್ಲಿ ಜಯಂತಿ ಶತಮಾನೋತ್ಸವದ ವಿವರ

		ರೂ ಪೈ
೧)	ಬಿಜಾಪುರ ಜಿಲ್ಲೆಯ ಕೂಡಲ ಸಂಗಮದಲ್ಲಿ ಬಸವ ಜಯಂತೋತ್ಸವವನ್ನು ಹಾಗೂ ಸಂಗೀತೋತ್ಸವವನ್ನು ಏರ್ಪಡಿಸಲಾಯಿತು. ಇದಕ್ಕಾಗಿ ಆದ ಖರ್ಚು.	೩,೦೦,೦೦೦–೦೦
೨)	ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಸಹಯೋಗದೊಂದಿಗೆ ೧೯೮೭ರ ಜನವರಿ ೨ ಮತ್ತು ೩ ರಂದು ನವದೆಹಲಿಯಲ್ಲಿ ಪುರಂದರ ಉತ್ಸವವನ್ನು ಆಚರಿಸಲಾಯಿತು. ಇದಕ್ಕಾಗಿ ಆದ ಖರ್ಚು.	೧,೮೦.೦೦೦–೦೦
೩)	೧೯೮೭–೮೮ನೇ ಸಾಲಿನಲ್ಲಿ	
೧)	೧೯೮೭ನೇ ಆಗಸ್ಟ್ ೨೯ ರಿಂದ ಮೂರು ದಿನಗಳ ಕಾಲ ಡಿ. ವಿ. ಜಿ. ಯವರ ಶತಮಾನೋತ್ಸವದ ಅಂಗವಾಗಿ ವಿಚಾರ ಸಂಕಿರಣವನ್ನು ಆಚರಿಸಲಾಯಿತು ಇದಕ್ಕಾಗಿ ಆದ ಖರ್ಚು.	೫೦,೦೦೦–೦೦
೨)	೧೯೮೭ನೇ ಅಕ್ಟೋಬರ್ ೯ರಿಂದ ೧೨ರ ವರೆಗೆ ಹಂಪೆಯಲ್ಲಿ ವಿಜಯನಗರ ದಸರಾ ಉತ್ಸವ ಹಾಗೂ ಪುರಂದರ ಉತ್ಸವವನ್ನು ಆಚರಿಸಲಾಯಿತು ಇದಕ್ಕಾಗಿ ಆದ ಖರ್ಚು	೧೬.೦೦,೦೦೦–೦೦